ಇ) ಹೌದು.

ಈ) ಹುಮನಾಬಾದ ತಾಲ್ಲೂಕಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 2011–12ನೇ ಸಾಲಿನಲ್ಲಿ ಇದುವರೆವಿಗೂ ತೋಟಗಾರಿಕೆ ಚಟುವಟಿಕೆಗಳಿಗೆ ಗ್ರಾಮಪಂಚಾಯತ್ ವತಿಯಿಂದ ಮಂಜೂರಾದ ಒಟ್ಟು ಅನುದಾನ 22.89 ಲಕ್ಷಗಳು ಹಾಗೂ ಖರ್ಚಾದ ಅನುದಾನ ರೂ. 21.31 ಲಕ್ಷಗಳು.

ವಿವರ ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ಕ್ರ.ಸಂ.	ಗ್ರಾಮ	ಮಂಜೂರಾದ ಅನುದಾನ	ಖರ್ಚಾದ ಅನುದಾನ
1	ಬೇಮಳಖೇಡಾ	6.18	5.38
2	ಮೀನಕೇರಾ	0.87	0.76
3	ಕಂದಗೂಳ	1.30	1.25
4	ನಂದಗಾಂವ	1.50	1.25
5	ಚೀನಕೇರಾ	1.30	1.28
6	ಬಶಿರಾಪೂರ	2.75	2.69
7	ಚಾಂಗಲೇರಾ	0.87	0.75
8	ಬನ್ನಳ್ಳಿ	3.87	3.71
9	ಮುತ್ತಂಗಿ	1.74	1.64
10	ಸೋನಕೇರಾ	1.50	1.42
11	ಸೀತಾಳಗೇರಾ	1.00	0.98
	ಒಟ್ಟು	22.89	21.31

ಮೀನುಗಾರರಿಗೆ ಆಶ್ರಯ ಮನೆ & ಮೀನುಗಾರರಿಗೆ ಬಲೆ ಒದಗಿಸುವುದು

293 (480) ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್) :– ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹುಮ್ನಾಬಾದ್ ಮತಕ್ಷೇತ್ರ ವ್ಯಾಪ್ತಿಯಲ್ಲಿ ಮೀನುಗಾರಿಕೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳು ಸಮಯಕ್ಕೆ ಸರಿಯಾಗಿ ಫಲಾನುಭವಿಗಳಿಗೆ ದೊರಕುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹುಮ್ನಾಬಾದ್ ಮತಕ್ಷೇತ್ರಕ್ಕೆ ಬಸವಕಲ್ಯಾಣ ತಾಲ್ಲೂಕಿನ ಕೆಲವು ಹಳ್ಳಿಗಳು ಸೇರ್ಪಡೆಯಾಗಿದ್ದು 2008 ರಿಂದ 2011ರವರೆಗೆ ಮೀನುಗಾರಿಕೆ ಇಲಾಖೆಯಿಂದ ಹುಮ್ನಾಬಾದ್ ತಾಲ್ಲೂಕಿಗೆ ಕೇವಲ ಐದು ಆಶ್ರಯ ಮನೆಗಳನ್ನು ಮಂಜೂರು ಮಾಡಿರುವುದು ತುಂಬಾ ಕಡಿಮೆಯಾಗಿರುವುದರಿಂದ ಹೆಚ್ಚುವರಿ ಮನೆಗಳನ್ನು ಮಂಜೂರು ಮಾಡಲಾಗುವುದೇ;

ಇ) ಮೀನುಗಾರರಿಗೆ ಮೀನು ಹಿಡಿಯಲು ಜಾಲಿಗೆ (ಬಲೆ) ಕೊಡುವುದು ಖಚಿತವೆ; ಹಾಗಿದ್ದಲ್ಲಿ ಎಂದು ಹಾಗೂ ಎಷ್ಟು ನೀಡಲಾಗುವುದು? (ವಿವರ ನೀಡುವುದು);

ಶ್ರೀ ಆನಂದ ವಸಂತ ಆಸ್ನೋಟಿಕರ್ (ಹುಮ್ನಾಬಾದ್):– (ಮೀನುಗಾರಿಕೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):–

ಅ) ಹೌದು.

ಆ) ಹುಮ್ನಾಬಾದ್ ಮತಕ್ಷೇತ್ರಕ್ಕೆ 2008–09ರಲ್ಲಿ 4, 2009–10ರಲ್ಲಿ 4 ಹಾಗೂ 2011–12ರಲ್ಲಿ 5 ಮನೆಗಳು ಹೀಗೆ ಒಟ್ಟು 13 ಮನೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಮುಂದೆ ಮನೆಗಳ ಲಭ್ಯತೆ ಮೇರೆಗೆ ಹೆಚ್ಚುವರಿ ಮನೆಗಳನ್ನು ನೀಡಲು ಪರಿಗಣಿಸಲಾಗುವುದು.

ಇ) ಹೌದು.

2011–12ನೇ ಸಾಲಿಗೆ ಹುಮ್ನಾಬಾದ್ ಮತಕ್ಷೇತ್ರಕ್ಕೆ 29 ಮೀನುಗಾರರಿಗೆ ರೂ. 5000–00 ದಂತೆ ಬಲೆ ವಿತರಿಸಲು ರೂ. 1.45 ಲಕ್ಷಕ್ಕೆ ಮಂಜೂರಾತಿ ನೀಡಲಾಗಿದ್ದು ಶೀಘ್ರದಲ್ಲಿ ಖರೀದಿಸಿ ವಿತರಿಸಲಾಗುವುದು.

ಪುರಸಭೆಗೆ ಅನುದಾನ ಬಿಡುಗಡೆ

294 (481) ಶ್ರೀ ರಾಜಶೇಖರ ಬಸವರಾಜ ಪಾಟೀಲ್:– (ಹುಮ್ನಾಬಾದ್):– ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–